**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು</u>**

**ಓಎಸ್ ನಂ. 128/2022**

ಡಿಡಬ್ಲ್ಯೂಃ 1

ದಿನಾಂಕಃ13.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂಡಿಆರ್ ರವರಿಂದಃ</u>**

3 ನೇ ಪ್ರತಿವಾದಿ ನನ್ನ ತಮ್ಮ. ಈ ದಾವೆಯನ್ನು ವಾದಿ ವೆಂಕಟಲಕ್ಷ್ಮಮ್ಮ ಹಾಕಿರುತ್ತಾರೆ. ವಾದಿ ಈ ದಾವೆಯನ್ನು ಸರ್ವೆ ನಂಬರ್ 8 ರಲ್ಲಿ ಅರ್ಧ ಎಕರೆ ಬರಬೇಕು ಎಂದು ಹಾಕಿರುತ್ತಾರೆ. ದಾವಾ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ವಾದಿಯರ ಜಮೀನು, ಉತ್ತರಕ್ಕೆ ಹೊಸದಾಗಿ ಜಾಗ

ತೆಗೆದುಕೊಂಡಿರುತ್ತಾರೆ ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎಂದು ತೋರಿಸಿರುತ್ತಾರೆ. ವಾದಿಯು ಎಷ್ಟು ವಿಸ್ತೀರ್ಣದ ಸ್ವತ್ತಿಗೆ ಮತ್ತು ಯಾವ ಚೆಕ್ಕುಬಂದಿಗೆ ದಾವೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಬೇರೆ ಮತ್ತು ದಾವಾ ಸ್ವತ್ತಿನ ವಿಸ್ತೀರ್ಣ ಮತ್ತು ಚೆಕ್ಕುಬಂದಿ ಬೇರೆ ಎಂದರೆ ಸರಿಯಲ್ಲ.

ವಾದಿಯ ಗಂಡ ನಾರಾಯಣ್ ರವರನ್ನು ನೋಡಿರುತ್ತೇನೆ. ದಿಃ 20.08.1966 ರಂದು ವಾದಿಯ ಗಂಡ ಮುನಿವೆಂಕಟರವರಿಂದ ದಾವಾ ಸ್ವತ್ತನ್ನು ಕ್ರಯ ಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು 27 ಗುಂಟೆ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ಗಂಡ ಖರೀದಿಸಿರುವ ಸ್ವತ್ತಿಗೂ ನನಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯ ಗಂಡ ಖರೀದಿಸಿದ ನಂತರ ದಾವಾ ಸ್ವತ್ತಿನಲ್ಲಿ ಮಾವಿನ ಗಿಡಗಳನು ಹಾಕಿ ಬೇಲಿ ಹಾಕಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 1 ನೇ ವಾದಿಯ ಗಂಡ 2010 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. 1 ನೇ ವಾದಿಯ ಗಂಡ ತೀರಿಕೊಂಡ ನಂತರ ಅವರ ಹೆಂಡತಿ, ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 1 ನೇ ವಾದಿಯ ಗಂಡ ಖರೀದಿಸಿದಾಗಿನಿಂದ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

ವಾದಿಗಳು ಮತ್ತು ನಮ್ಮ ನಡುವೆ ದಾರಿ ವಿಚಾರದಲ್ಲಿ ತಕರಾರು ಇರುವುದಿಲ್ಲ. ಪ್ರತಿವಾದ ಪತ್ರದಲ್ಲಿ ತಿಳಿಸಿರುವ ವಿಚಾರಗಳು ಗೊತ್ತಿರುತ್ತವೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿರುತ್ತವೆ. ಪ್ರತಿವಾದ ಪತ್ರದಲ್ಲಿ ಖಂಡಿಕೆ 9 ರಲ್ಲಿ ಹಳೆ ಸರ್ವೆ ನಂಬರ್ 8 ಹೊಸ ಸರ್ವೆ ನಂಬರ್ 13 ಕರಾಬು ಒಳಗೊಂಡು 5 ಎಕರೆ 14 ಗುಂಟೆ ಕತ್ತಳ್ಳಿ ಗಿಡದ ಬೇಲಿಯನ್ನು ವಾದಿಯ ಗಂಡ ಹಾಕಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು 27 ಗುಂಟೆಗೆ ಬೇಲಿ ಹಾಕಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದ ಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ 27 ಗುಂಟೆಗೆ ಬೇಲಿ ಹಾಕಿಕೊಂಡಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದ ಪತ್ರದಲ್ಲಿ ತಿಳಿಸಿರುವಂತೆ 10 ರಿಂದ 13 ಅಡಿ ದಾರಿ ಇದೆ ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳಿದ ಸರ್ವೆ ನಂಬರ್ ನಲ್ಲಿ ಯಾವುದೇ ದಾರಿ ಇಲ್ಲ, ಆ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಸಂಬಂಧಿಕರು ಅಲ್ಲ. ಪ್ರತಿವಾದ ಪತ್ರ ಸಲ್ಲಿಸುವಾಗ ನಾನು ಮತ್ತು ಇತರೆ ಪ್ರತಿವಾದಿಗಳು ಸೇರಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ. ಪ್ರತಿವಾದ ಪತ್ರದಲ್ಲಿ 1 ನೇ ಪ್ರತಿವಾದಿಯ ತಂದೆ 1988 ರಲ್ಲಿ ದಾವಾ ಸರ್ವೆ ನಂಬರ್ ನಲ್ಲಿ 2 ಎಕರೆ 4 ಗುಂಟೆ ಖರೀದಿಸಿದ್ದಾರೆ ಎಂದು ಹೇಳಿರುವುದು ಸರಿ, 1 ನೇ ಪ್ರತಿವಾದಿಯ ತಂದೆ ಖರೀದಿಸುವ ಕಾಲಕ್ಕೆ ನಾನು ಇರಲಿಲ್ಲ. ಸದರಿ ಕ್ರಯ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಆ ಎರಡು ಎಕರೆ 4 ಗುಂಟೆ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ದಾರಿ, ಪಶ್ಚಿಮಕ್ಕೆ ಆನಂದ್ ಶೆಟ್ಟಿ ಉತ್ತರಕ್ಕೆ ವಾದಿ, ದಕ್ಷಿಣಕ್ಕೆ ರಾಜಕಾಲುವೆ ಮತ್ತು ನಮ್ಮ ಜಮೀನು.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/-

(ಶ್ರೀಮತಿ ರೋಹಿಣಿ. ಡಿ)

ಅಪರ ಸಿ.ಜೆ ಮತ್ತು ಜೆಎಂಎಫ್ ಸಿ

ಮುಳಬಾಗಿಲು